ಕರ್ನಾಟಕದಲ್ಲೀಗ ಚಾಲ್ತಿಯಲ್ಲಿರುವುದು ಚುನಾವಣಾ ಋತು. 2018ರ ಏಪ್ರಿಲ್– ಮೇ ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಕಣ ನಾಡಿನಲ್ಲಾಗಲೇ ರಂಗೇರಿದೆ. ಪ್ರಮುಖ ರಾಜಕೀಯ ಪಕ್ಷಗಳು ಪ್ರತಿ ದಿನವೂ ಆರೋಪಗಳನ್ನೂ ಬೈಗುಳಗಳನ್ನೂ ಸಾರ್ವಜನಿಕವಾಗಿ ಬಿಡುಗಡೆ ಮಾಡುತ್ತಿವೆ. ಜನರ ಪಾಲಿಗಿದು ಮನರಂಜನೆ!

ಪ್ರತಿದಿನವೂ ಬಿಡುಗಡೆಯಾಗುತ್ತಿರುವ 'ರಾಜಕಾರಣ'ದ ಕಲರ್‌ಫುಲ್ ಸಿನಿಮಾಗಳ ನಡುವೆ ಕನ್ನಡ ಚಿತ್ರರಂಗವೇ ಕೊಂಚ ಕಳೆಗುಂದಿದಂತಿದೆ. ರಾಜಕಾರಣದ ಕಥಾವಸ್ತುಗಳ ನಿರ್ವಹಣೆಯಲ್ಲಂತೂ ಗಾಂಧಿನಗರ ಯಾವತ್ತೂ ವಿಪರೀತ ಉತ್ಸಾಹ ತೋರಿಸಿದ್ದಿಲ್ಲ. 'ಬರ', 'ಅವಸ್ಥೆ', 'ಮತದಾನ', 'ಅಂತ', 'ಚಕ್ರವ್ಯೂಹ', 'ಪೃಥ್ವಿ', 'ಹುಲಿಯಾ', 'ಪುಟ್ಟಕ್ಕನ ಹೈವೇ' ರೀತಿಯ ಕೆಲವು ಉದಾಹರಣೆಗಳನ್ನು ಬಿಟ್ಟರೆ, ಸಕ್ರಿಯ ರಾಜಕಾರಣಕ್ಕೆ ನೇರ ಮುಖಾಮುಖಿಯಾದ ದೃಶ್ಯಪ್ರಯತ್ನಗಳು ವಿರಳ. ವರ್ತಮಾನದ ಬದುಕಿನ ತುಂಬಾ ರಾಜಕಾರಣವೇ ಆವರಿಸಿಕೊಂಡಿರುವಾಗ, ಚಿತ್ರರಂಗ ಮಾತ್ರ ರಾಜಕಾರಣದತ್ತ ಅನಾಸಕ್ತಿ ಹೊಂದಿರುವುದು ಕುತೂಹಲ ಹುಟ್ಟಿಸುವಂತಿದೆ. ಈ ಕೊರತೆಯನ್ನು ತೆರೆಯಾಚೆಗಿನ ರಾಜಕಾರಣ ತುಂಬುತ್ತಿರುವುದರಿಂದ ಚಿತ್ರೋದ್ಯಮದಲ್ಲೊಂದು ಸಮತೋಲನ ಉಂಟಾಗಿದೆ ಎನ್ನಬಹುದು. ರಾಜಕಾರಣದ ಮಾತಿರಲಿ, 2017ರ ಕೊನೆಯಲ್ಲಿ ನಿಂತು ಹಿಂತಿರುಗಿ ನೋಡಿದರೆ ಕಾಣಿಸುವ ಕನ್ನಡ ಚಿತ್ರರಂಗದ ಬಿಂಬ ಯಾವುದು?

## 'ಅಲೆ'ಯ ಬೆನ್ನೇರಿ...

ಕಳೆದ ಎರಡು ಮೂರು ವರ್ಷಗಳಿಂದ ಗಾಂಧಿನಗರದಲ್ಲಿ ಚಾಲ್ತಿಯಲ್ಲಿರುವ ಜನಪ್ರಿಯ ಪದ – 'ಹೊಸ ಅಲೆ'. ಯುವ ನಿರ್ದೇಶಕರ ಗಮನಾರ್ಹ ಚಿತ್ರಗಳ ಹಿನ್ನೆಲೆಯಲ್ಲಿ ಚಲಾವಣೆಗೆ ಬಂದಿರುವ ಪದವಿದು. ಇದೇನು ನಿಜವಾದ ಅಲೆಯೋ ಅಥವಾ ಬರೀ ನೊರೆಯೋ ಎಂದು ಕಣ್ಣರಳಿಸಿ ನೋಡಿದರೆ ಕುತೂಹಲಕರ ಚಿತ್ರಗಳು ಎದುರಾಗುತ್ತವೆ.

ಹೊಸ ಅಲೆಯ ಉದ್ಘಾಟನಾ ಚಿತ್ರದ ರೂಪದಲ್ಲಿ ನೋಡಬಹುದಾದ ಪ್ರಮುಖ ಸಿನಿಮಾ ರಾಮ್‌ರೆಡ್ಡಿ ನಿರ್ದೇಶನದ 'ತಿಥಿ'. ಹೇಮಂತ್ ರಾವ್‌ರ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', ಅರವಿಂದ್ ಶಾಸ್ತ್ರಿಯ 'ಕಹಿ', ಸತ್ಯಪ್ರಕಾಶ್‌ರ 'ರಾಮಾ ರಾಮಾ ರೇ' ಸಿನಿಮಾಗಳು ಕೂಡ ಅಲೆಯನ್ನು ವಿಸ್ತರಿಸಿದ ಖ್ಯಾತಿಗೆ ಭಾಜನವಾಗಿವೆ. ಸಂತೋಷ್ ಆನಂದರಾಮ್ ಅವರ 'ರಾಜ್‌ಕುಮಾರ' ಹಾಗೂ 2016ರ ಕೊನೆಯಲ್ಲಿ ತೆರೆಕಂಡು 2017ರಲ್ಲಿ ಬಹುದೊಡ್ಡ ಯಶಸ್ಸು ಕಂಡ ರಿಷಬ್ ಶೆಟ್ಟಿಯ 'ಕಿರಿಕ್ ಪಾರ್ಟಿ' ಕಮರ್ಷಿಯಲ್ ನೆಲೆಗಟ್ಟಿನಲ್ಲಿ ಬಹುದೊಡ್ಡ ಯಶಸ್ಸು ಕಂಡ ಪ್ರಯತ್ನಗಳು. ಇವರ ಜೊತೆಗೆ ಯೋಗರಾಜ ಭಟ್, ಸೂರಿ, ಜಯತೀರ್ಥರಂಥ ನಿರ್ದೇಶಕರು ಕೂಡ ಕನ್ನಡ ಚಿತ್ರರಂಗದ ಹೊಳಪಿಗೆ ಕಾರಣರಾಗಿದ್ದಾರೆ.

2017ರಲ್ಲಿ ತೆರೆಕಂಡ ಚಿತ್ರಗಳ ಹಿನ್ನೆಲೆಯಲ್ಲಿ 'ಹೊಸ ಅಲೆ' ಪರಿಕಲ್ಪನೆಗೆ ಕೆಲವು ಉದಾಹರಣೆಗಳನ್ನು ಗಮನಿಸಬಹುದು. ಈ ನಿಟ್ಟಿನಲ್ಲಿ ತಕ್ಷಣ ನೆನಪಿಸಿಕೊಳ್ಳಬಹುದಾದ ಚಿತ್ರಗಳು: 'ದಯವಿಟ್ಟು ಗಮನಿಸಿ' (ನಿ: ರೋಹಿತ್ ಪದಕಿ), 'ಒಂದು ಮೊಟ್ಟೆಯ ಕಥೆ' (ನಿ: ರಾಜ್ ಶೆಟ್ಟಿ), 'ಉರ್ವಿ' (ನಿ: ಪ್ರದೀಪ್ ವರ್ಮ), 'ಶುದ್ಧಿ' (ನಿ: ಆದರ್ಶ್ ಈಶ್ವರಪ್ಪ) ಹಾಗೂ 'ಚೌಕ' (ನಿ: ತರುಣ್ ಸುಧೀರ್). ಇವುಗಳ ಜೊತೆಗೆ, ಗಿರಿರಾಜ್ ನಿರ್ದೇಶನದ 'ಅಮರಾವತಿ', ಟಿ.ಎಸ್. ನಾಗಾಭರಣರ 'ಅಲ್ಲಮ', ಜಯತೀರ್ಥರ 'ಬ್ಯೂಟಿಫುಲ್ ಮನಸುಗಳು', ಯೋಗರಾಜ ಭಟ್‌ರ 'ಮುಗುಳುನಗೆ' ಚಿತ್ರಗಳನ್ನು ಕಥನ ಹಾಗೂ ಪ್ರಯೋಗದ ಕಾರಣದಿಂದಾಗಿ ಗಮನಿಸಬೇಕು. ಪೌರ ಕಾರ್ಮಿಕರ ತವಕತಲ್ಲಣಗಳನ್ನು ಹತಾಶೆ–ಸಿಟ್ಟಿನ ನೆಲೆಯಲ್ಲಿ ಕಟ್ಟಿಕೊಡುವ 'ಅಮರಾವತಿ' ಅತ್ಯುತ್ತಮ ಚಿತ್ರ ರಾಜ್ಯಪ್ರಶಸ್ತಿ ಪಡೆಯುವುದರ ಜೊತೆಗೆ, ಸಹೃದಯರ ಮನಸ್ಸಿನಲ್ಲಿ ಕಂಪನಗಳನ್ನು ಉಂಟುಮಾಡಿದ ಅಪರೂಪದ ಪ್ರಯತ್ನ.

ಟಿ.ಎನ್. ಸೀತಾರಾಮ್ ನಿರ್ದೇಶನದ 'ಕಾಫಿತೋಟ', ಮಿತ್ರ ನಿರ್ಮಾಣ–ನಟನೆಯ 'ರಾಗ', ಸಿಂಪಲ್ ಸುನಿಯ 'ಆಪರೇಷನ್ ಅಲಮೇಲಮ್ಮ', ರಮೇಶ್ ಅರವಿಂದ್ ನಟನೆಯ ನೂರನೇ ಸಿನಿಮಾ 'ಪುಷ್ಪಕ ವಿಮಾನ', ಗುರುಪ್ರಸಾದ್ ನಿರ್ದೇಶನದ 'ಎರಡನೇ ಸಲ', ಭರತ್ ನಿರ್ದೇಶನದ 'ಸಾಹೇಬ', ಅರವಿಂದ ಕೌಶಿಕ್ ನಿರ್ದೇಶನದ 'ಹುಲಿರಾಯ' – ಇವೆಲ್ಲ ಬೇರೆ ಬೇರೆ ಕಾರಣಗಳಿಂದ ಗಾಂಧಿನಗರದ ಗಮನ ಸೆಳೆದ ಕಮರ್ಷಿಯಲ್ ಪ್ರಯೋಗಗಳು. ಇವುಗಳ ಜೊತೆಗೆ ತಾರಾವರ್ಚಸ್ಸಿನ ಪುನೀತ್‌ರ 'ರಾಜ್‌ಕುಮಾರ', ದರ್ಶನ್‌ರ 'ತಾರಕ್', ಧ್ರುವ ಸರ್ಜಾರ 'ಭರ್ಜರಿ', ಸುದೀಪ್ ನಟನೆಯ 'ಹೆಬ್ಬುಲಿ', ಶಿವರಾಜ್‌ಕುಮಾರ್ ಅಭಿನಯಿಸಿದ 'ಶ್ರೀಕಂಠ' ಹಾಗೂ ಮುರಳಿಯ 'ಮಫ್ತಿ' ಚಿತ್ರಗಳ ಹೊಳಪನ್ನು ನೆನಪಿಸಿಕೊಳ್ಳಬೇಕು. 'ರಾಜ್‌ಕುಮಾರ' ಹಾಗೂ 'ತಾರಕ್' ಚಿತ್ರಗಳಿಗೆ ಕೌಟುಂಬಿಕ ಪ್ರೇಕ್ಷಕರನ್ನು ಮರಳಿ ಚಿತ್ರಮಂದಿರಕ್ಕೆ ಕರೆತಂದ ಯಶಸ್ಸು ಸಲ್ಲಬೇಕು. 'ಭರ್ಜರಿ' ಹಾಗೂ 'ಮಫ್ತಿ' ಯುವಪ್ರೇಕ್ಷಕರಿಗೆ ಹಬ್ಬವಾಗಿ ಪರಿಣಮಿಸಿದ ಚಿತ್ರಗಳು. ನರ್ತನ್ ಎನ್ನುವ ಯುವ ನಿರ್ದೇಶಕನ ಚೊಚ್ಚಿಲ ಪ್ರಯತ್ನವಾದ 'ಮಫ್ತಿ' ತಾಂತ್ರಿಕ ಕಾರಣಗಳಿಂದಾಗಿ ಗಮನಸೆಳೆದ ಸಿನಿಮಾ. ವಿಕ್ರಮ್ ಸೂರಿ ನಿರ್ದೇಶನದ 'ಎಳೆಯರು ನಾವು ಗೆಳೆಯರು' ಮಕ್ಕಳ ಸಿನಿಮಾ ಹಾಗೂ ವಿನಯಾ ಪ್ರಸಾದ್‌ರ ಚೊಚ್ಚಿಲ ನಿರ್ದೇಶನದ 'ಲಕ್ಷ್ಮೀನಾರಾಯಣರ ಪ್ರಪಂಚಾನೇ ಬೇರೆ' ಕೂಡ ಪ್ರೇಕ್ಷಕರ ಗಮನ ಸೆಳೆದ ಚಿತ್ರಗಳು.

ಕಮರ್ಷಿಯಲ್ ಚಿತ್ರಗಳ ಪ್ರಭಾವಳಿಯಲ್ಲಿ ಕಲಾತ್ಮಕ ಚಿತ್ರಗಳು ಕೊಂಚ ಕಳಾಹೀನವಾದ ವರ್ಷ 2017.



'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ಜೋಡಿ ಶ್ರದ್ಧಾ ಶ್ರೀನಾಥ್ ಹಾಗೂ ರಿಷಿ